**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.42/2024**

| | | |
|---|---|---|
| ಹೆಸರು | ಇನಾಯತ್ ಖಾನ್ | PW –2 |
| ತಂದೆಯ ಹೆಸರು | ವಜೀರ್ ಖಾನ್ | CW –3 |
| ವಯಸ್ಸು | 49 ವರ್ಷ | |
| ಉದ್ಯೋಗ | ಚಾಲಕ | ದಿನಾಂಕಃ 19.12.2024 |
| ವಾಸ | ಮಲೆಬೆನ್ನೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 2 ರವರ ಪರಿಚಯ ಇದೆ. ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ, ಅದು ಕೃತ್ಯ ನಡೆದ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಈಗಾಗಲೇ ನಿಪಿ 1 ಮತ್ತು 2 ಎಂದು ಗುರುತಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಮತ್ತು ನಿಪಿ 2(ಬಿ) ಎಂದು ಗುರುತಿಸಲಾಯಿತು. ದಿನಾಂಕ 03.07.2023 ರಂದು ಹರಿಹರ ಶಿವಮೊಗ್ಗ ರಸ್ತೆಯಲ್ಲಿ ಒಂದು ದಾಬಾದ ಹತ್ತಿರ ಕೆ ಎಸ್ ಆರ್ ಟಿ ಸಿ ಬಸ್ ಮತ್ತು ಲಾರಿ ಯ ನಡುವೆ ಅಪಘಾತವಾದ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಿದ ಕಾಲಕ್ಕೆ ನಿಪಿ 1 ಮತ್ತು 2 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆ ಸಮಯದಲ್ಲಿ ಪೊಲೀಸರು ಜರುಗಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದು ವಾಹನ ಪಂಚನಾಮೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ದಿನಾಂಕ 04.07.2023 ರಂದು ನಿಪಿ 3 ಕ್ಕೆ ಹರಿಹರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಪಘಾತಕ್ಕೊಳಗಾದ ವಾಹನಗಳ ಪರೀಶಿಲನಾ ಪಂಚನಾಮೆ ವಾಡಿದ ಕಾಲಕ್ಕೆ ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ನನ್ನ ಜೊತೆ ಚಾಸಾ 3 ಸಹ ಇದ್ದರು. ಸದರಿ ಪಂಚನಾಮೆಯನ್ನು 11.30 ರಿಂದ 12.30 ಗಂಟೆವರೆ ಜರುಗಿಸಲಾಗಿದೆ. ಸಾಕ್ಷಿಗೆ ನಾಲ್ಕು ಛಾಯಾಚಿತ್ರ ಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈಗಾಗಲೇ ನಿಪಿ 4 ರಿಂದ 7 ಎಂದು ಗುರುತಿಸಲಾಗಿದೆ. ನಿಪಿ 4 ರಿಂದ 7 ನ್ನು ಪೊಲೀಸರು ಪಂಚನಾಮೆ ಮಾಡಿದ ಕಾಲಕ್ಕೆ ತೆಗೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

2 ನೇ ಆರೋಪಿ ನಮ್ಮ ಊರಿನವರೆ ಎಂದರೆ ನಿಜ. ಲಾರಿ ಮಾಲೀಕರಾದ ಚಾಸಾ 20 ರವರ ಪರಿಚಯ ಇಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಆದ್ದರಿಂದ ನನಗೆ ನಿಪಿ.1 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ 1 ರಿಂದ 3 ನ್ನು ಪೊಲೀಸರು ಬರೆದಿರುತ್ತಾರೆ. ಅಪಘಾತದ ರಸ್ತೆಯಲ್ಲಿ ಹನಿ ಗಾರ್ಡನ್ ಎದುರುಗಡೆ ಇನ್ನೊಂದು

ಸಲುವಾಗಿ ನಮ್ಮಗಳ ಸಮಕ್ಷಮ ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ಆವರಣದಲ್ಲಿ ಮಧ್ಯಾಹ್ನ 12.30 ರಿಂದ 1.30 ಗಂಟೆ ವರೆಗೆ ನಮ್ಮಗಳ ಸುವಕ್ಷಮ ಪೊಲೀಸರು ನಿಪಿ 3 ರಂತೆ ಪಂಚನಾಮೆ ಜರುಗಿಸಿ, ಆ ಕಾಲಕ್ಕೆ ನಿಪಿ 4 ರಿಂದ 7 ರಂತೆ ಛಾಯಾಚಿತ್ರ ವನ್ನು ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

2 ನೇ ಆರೋಪಿ ನಮ್ಮ ಊರಿನವರೆ ಎಂದರೆ ನಿಜ. ಸದರಿ ಅಪಘಾತಕ್ಕೊಳಗಾದ ಲಾರಿ ನಮ್ಮ ಊರಿನದೆ ಎಂದರೆ ಸರಿ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಆದ್ದರಿಂದ ನನಗೆ ನಿಪಿ.1 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತದ ರಸ್ತೆಯಲ್ಲಿ ಹನಿ ಗಾರ್ಡನ್ ಎದುರುಗಡೆ ಇನ್ನೊಂದು ಹೋಟೆಲ್ ಇದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಸಾಕಷ್ಟು ಜನ ಸಂಚಾರ ಇರುತ್ತದೆ ಎಂದರೆ ಸರಿ. ಸದರಿ ಅಪಘಾತವಾದ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಆದ್ದರಿಂದ ಅಲ್ಲಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಹನಿ ಗಾರ್ಡನ ಹತ್ತಿರ ಪೆಟ್ರೋಲ್ ಬಂಕ್ ಇದೆ ಎಂದರೆ ಸರಿ. ಅಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಕೃತ್ಯ ನಡೆದ ಸ್ಥಳಿಕರಲ್ಲ ಎಂದರೆ ಸರಿ. ಅಪಘಾತಕ್ಕೊಳಗಾದ ಬಸ್ ನಂ. ಕೆಎ/09/ಎಫ್/5460 ಮತ್ತು ಲಾರಿ ನಂ. ಕೆಎ/14/ಎ8673 ಆಗಿರುತ್ತದೆ. ಈ ದಿನ ನಾನು ನ್ಯಾಯಾಲಯಕ್ಕೆ ದ್ವಿಚಕ್ರ ವಾಹನದಲ್ಲಿ ಬಂದಿದ್ದು, ಸದರಿ ವಾಹನದ ನಂಬರ್ ನನಗೆ ಹೇಳಲಾಗುವುದಿಲ್ಲ. ಪಂಚನಾಮೆಯನ್ನು ಯಾರು ಬರೆದರು, ಅವರ ಹೆಸರು, ಅವರ ಪದನಾಮೆ ನನಗೆ ಹೇಳಲು ಆಗುವುದಿಲ್ಲ. ಸದರಿ ಪಂಚನಾಮೆಯನ್ನು ಜರುಗಿಸುವ ಪೂರ್ವದಲ್ಲಿ ಪೋಲಿಸರು ನನಗೆ ಯಾವುದೇ ನೋಟಿಸ್ ನ್ನು ನನಗೆ ನೀಡಿರುವುದಿಲ್ಲ. ನಿಪಿ.2 ಕ್ಕೆ ಸಹಿ ಯಾವ ಸ್ಥಳದಲ್ಲಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಪಿ.1 ಮತ್ತು 2 ನ್ನು ಅಪಘಾತಕ ಸ್ಥಳದಲ್ಲಿ ಜರುಗಿಸಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಪೋಲಿಸ್ ಠಾಣೆಯಲ್ಲಿ ತಯಾರಿಸಿದ್ದು, ಆರೋಪಿತನ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ನ್ನು ಸದರಿ ಪ್ರಕರಣಕ್ಕೆ ಅನುಕೂಲವಾಗುಂತೆ ಸುಳ್ಳು ಸೃಷ್ಟಿ ಮಾಡಿದ್ದು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.

**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.42/2024**

| | | |
|---|---|---|
| ಹೆಸರು | ಜಾಕೀರ್ ಹುಸೇನ್ | PW –1 |
| ತಂದೆಯ ಹೆಸರು | ಬಿ ಸಾದಿಕ್‌ವುಲ್ಲಾ | CW –2 |
| ವಯಸ್ಸು | 39 ವರ್ಷ | |
| ಉದ್ಯೋಗ | ಕೂಲಿ | ದಿನಾಂಕಃ 19.12.2024 |
| ವಾಸ | ಮಲೆಬೆನ್ನೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 3 ರವರ ಪರಿಚಯ ಇದೆ. ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ, ಅದು ಕೃತ್ಯ ನಡೆದ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 1 ಮತ್ತು 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಮತ್ತು ನಿಪಿ 2(ಎ) ಎಂದು ಗುರುತಿಸಲಾಯಿತು. ದಿನಾಂಕ 03.07.2023 ರಂದು ಹನಿ ಗಾರ್ಡನ ಹೊಟೇಲ್ ಮುಂಭಾಗ ಹಾದು ಹೋಗಿರುವ ಹರಿಹರ ಶಿವಮೊಗ್ಗ ರಸ್ತೆಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಮತ್ತು ಲಾರಿ ಯ ನಡುವೆ ಅಪಘಾತವಾದ ವಿಚಾವಾಗಿ ಪೊಲೀಸರು ಪಂಚನಾಮೆ ಮಾಡಿದ ಕಾಲಕ್ಕೆ ನಿಪಿ 1 ಮತ್ತು 2 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆ ಸಮಯದಲ್ಲಿ ಪೊಲೀಸರು ಜರುಗಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದು ವಾಹನ ಪಂಚನಾಮೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ದಿನಾಂಕ 04.07.2023 ರಂದು ನಿಪಿ 3 ಕ್ಕೆ ಹನಿ ಗಾರ್ಡನ ಡಾಬಾ ಹತ್ತಿರ ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ನನ್ನ ಜೊತೆ ಚಾಸಾ 3 ಸಹ ಇದ್ದರು. ನಿಪಿ 3 ಕ್ಕೆ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಸಾಕ್ಷಿಗೆ ನಾಲ್ಕು ಛಾಯಾಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ನಿಪಿ 4 ರಿಂದ 7 ನ್ನು ಪೊಲೀಸರು ಪಂಚನಾಮೆ ಮಾಡಿದ ಕಾಲಕ್ಕೆ ತೆಗೆದಿರುತ್ತಾರೆ.

(ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಭಾಗಷಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ 04.07.2023 ರಂದು ಪೊಲೀಸರು ಅಪಘಾತಕ್ಕೊಳಗಾದ ಕೆ ಎ 09 ಎಫ್ 5465 ಕೆ ಎಸ್ ಆರ್ ಟಿ ಸಿ ಬಸ್ ಮತ್ತು ಕೆ ಎ 14 ಎ 8673 ನೇ ಲಾರಿಯ ವಾಹನಗಳನ್ನು ಐ ಎಂ ವಿ ತಪಾಸಣೆ

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.

**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ ಸಿ ನಂ. 985/2021**

| | | |
|---|---|---|
| ಹೆಸರು | ಮೊಹಮ್ಮದ ಸೈಫುದ್ದೀನ್ | PW –1 |
| ತಂದೆಯ ಹೆಸರು | ಅಬ್ದುಲ್ ಮಜೀದ್ | CW –1 |
| ವಯಸ್ಸು | 58 ವರ್ಷ | |
| ಉದ್ಯೋಗ | ಪಿ ಎಸ್ ಐ, ಹೊನ್ನಾಳಿ ಠಾಣೆ | ದಿನಾಂಕಃ 19.12.2024 |
| ವಾಸ | ಹೊನ್ನಾಳಿ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**
**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಸನ್ 2014 ರಿಂದ 2022 ರ ವರೆಗೆ ನಾನು ಹರಿಹರ ಗ್ರಾಮಾಂತರ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21.12.2020 ರಂದು ಮಧ್ಯಾಹ್ನ 1.15 ಗಂಟೆ ಸಮಯಲ್ಲಿ ನಾನು ಠಾಣಾ ಪ್ರಭಾಗದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂಬರ 201/2020 ರಲ್ಲಿ ಕಲಂ 279, 337, 304 ಎ ಐ ಪಿ ಸಿ ರೀತ್ಯ ಪ್ರಕರಣವನ್ನು ದಾಖಲಿಸಿ, ಪ್ರವವ ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು, ಪ್ರವವ ವರದಿಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಹರಿಹರದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಚಾಸಾ 4 ಮತ್ತು 5 ರವರ ಸಮಕ್ಷಮ ಮೃತ ಗದಿಗೆಪ್ಪ ತಂದೆ ನಿಂಗಪ್ಪ ಇವರ ಶವ ತನಿಖಾ ಪಂಚನಾಮೆಯನ್ನು ಜರುಗಿಸಿ, ಆ ಕಾಲಕ್ಕೆ ಎರಡು ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ ನಂತರ ಸಾಕ್ಷಿದಾರರಾದ ಚಾಸಾ 4, 9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಶವ ತನಿಖಾ ವರದಿಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು, ಛಾಯಾಚಿತ್ರಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ 33 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಾಸಾ 1 ರವರು ನೀಡಿದ ದೂರಿನ ಆಧಾರದ ಮೇಲೆ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ತಪ್ಪಿನಿಂದ ಯಾವುದೇ ಅಪಘಾತವಾಗದಿದ್ದರೂ ಸಹ ಮೃತರ ಕುಟುಂಬಕ್ಕೆ ಪರಿಹಾರ ಒದಗಿಸಲು, ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ 23.12.2020 ರಂದು ಪೊಲೀಸರು ಹರಿಹರ ಶಿವಮೊಗ್ಗ ರಾಜ್ಯ ಹೆದ್ದಾರಿಯ ಬ್ಯಾಲದಹಳ್ಳಿ ಗ್ರಾಮದ ಕೇಂದ್ರೀಯ ಜಲ ಆಯೋಗ, ಕಿರಿಯ ಅಭಿಯಂತರರ ಕಛೇರಿ ಮುಂಭಾಗ ಹಾದು ಹೋಗಿರುವ ರಸ್ತೆಯಲ್ಲಿ ನನ್ನನ್ನು ಮತ್ತು ಚಾಸಾ 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಪ್ರಕರಣದ ವಿದ್ಯಮಾನ ತಿಳಿಸಿ, ಪಂಚರಾಗಲು ಕೋರಿದ ಮೇರೆಗೆ ನಾವುಗಳು ಒಪ್ಪಿ ದಿನಾಂಕ 21.12.2020 ರಂದು ಪ್ಯಾಸೆಂಜರ್ ಆಟೋ ಮತ್ತು ಕಾರಿನ ಮಧ್ಯ ಆದ ಅಪಘಾತದ ವಿಚಾರವಾಗಿ ಮಧ್ಯಾಹ್ನ 1.30 ರಿಂದ 2.30 ಗಂಟೆ ವರೆಗೆ ನಮ್ಮಗಳ ಸುವಕ್ಷಮ ಪೊಲೀಸರು ನಿಪಿ 6 ರಂತೆ ಪಂಚನಾಮೆ ಜರುಗಿಸಿ, ಆ ಕಾಲಕ್ಕೆ ನಿಪಿ 7 ಮತ್ತು 8 ರಂತೆ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 23.12.2020 ರಂದು ಪೊಲೀಸರು ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ಆವರಣದಲ್ಲಿ ನಮ್ಮಗಳ ಸಮಕ್ಷಮ ಅಪಘಾತಕ್ಕೊಳಗಾದ ಪ್ಯಾಸೆಂಜರ್ ಆಟೋ ನಂಬರ ಕೆ ಎ 27 ಬಿ 4075 ನ್ನು ಮಧ್ಯಾಹ್ನ 3.00 ರಿಂದ 3.45 ಗಂಟೆ ವರೆಗೆ ನಮ್ಮಗಳ ಸುವಕ್ಷಮ ಪೊಲೀಸರು ನಿಪಿ 9 ರಂತೆ ಪಂಚನಾಮೆ ಜರುಗಿಸಿ, ಆ ಕಾಲಕ್ಕೆ ನಿಪಿ 10 ಮತ್ತು 13 ರಂತೆ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಎಲ್ಲಾ ವಿಚಾರ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.

**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 985/2021**

| | | |
|---|---|---|
| ಹೆಸರು | ಚಂದ್ರಪ್ಪ | PW –2 |
| ತಂದೆಯ ಹೆಸರು | ಹಾಲಪ್ಪ | CW –2 |
| ವಯಸ್ಸು | 61 ವರ್ಷ | |
| ಉದ್ಯೋಗ | ವ್ಯವಸಾಯ | ದಿನಾಂಕಃ 19.12.2024 |
| ವಾಸ | ಕುಂಬಳೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 3 ರವರ ಪರಿಚಯ ಇಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಅಪರಾಧ ವಿವರ ನಮೂನೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಕಳೆದ 3–4 ವರ್ಷಗಳ ಹಿಂದೆ ಬ್ಯಾಲದಹಳ್ಳಿ ಗ್ರಾಮದಲ್ಲಿ ನಿಪಿ 6 ಕ್ಕೆ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ 6 ಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು. ನಿಪಿ 7 ಮತ್ತು 8 ನ್ನು ಪೊಲೀಸರು ತೆಗೆದಿದ್ದು, ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ 7 ಮತ್ತು 8 ಕ್ಕೆ ನಿಂತುಕೊಂಡಿರುತ್ತೇನೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದು ವಾಹನ ಪಂಚನಾಮೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ, ಯಾವಾಗ ಮತ್ತು ಯಾವ ಕಾರಣಕ್ಕಾಗಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಾಲ್ಕು ಛಾಯಾಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳಲ್ಲಿ ಮೂರು ಛಾಯಾಚಿತ್ರಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಇನ್ನೊಂದು ಛಾಯಾಚಿತ್ರದಲ್ಲಿ ಅಪಘಾತಕ್ಕೊಳಗಾದ ಆಟೋವನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ನಿಪಿ 10 ರಿಂದ 13 ಎಂದು ಗುರುತಿಸಲಾಯಿತು. ನಿಪಿ 10 ರಿಂದ 13 ನ್ನು ಪೊಲೀಸರು ತೆಗೆದಿದ್ದು, ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ 10 ರಿಂದ 12 ಕ್ಕೆ ನಿಂತುಕೊಂಡಿರುತ್ತೇನೆ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಮರು ವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮಎಫ್ ಸಿ ನ್ಯಾಯಾಲಯ,ಹರಿಹರ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ ನಂ. 969/2023

| | | |
|---|---|---|
| ಹೆಸರು | ಅರವಿಂದ ಸಿ ಜೆ | PW –2 |
| ಗಂಡನ ಹೆಸರು | ಗಿರೀಶ್ | CW –3 |
| ವಯಸ್ಸು | 27 ವರ್ಷ | |
| ಉದ್ಯೋಗ | ಅಬಕಾರಿ ಮುಖ್ಯ ಪೇದೆ, ಅಬಕಾರಿ ಉಪ ಆಯುಕ್ತಕರ ಕಛೇರಿ, ದಾವಣಗೆರೆ | ದಿನಾಂಕಃ 19.12.2024 |
| ವಾಸ | ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ದಿನಾಂಕ 25.06.2018 ರಿಂದ 05.02.2024 ರವರೆಗೆ ನಾನು ಹರಿಹರ ಅಬಕಾರಿ ಕಛೇರಿಯಲ್ಲಿ ಅಬಕಾರಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 27.02.2023 ರಂದು ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿದ್ದ 90 ಎಂ ಎಲ್ ನ 30 ಟೆಟ್ರಾ ಪ್ಯಾಕ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಚಿತ್ರದುರ್ಗದ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ. ನಂತರ ದಿನಾಂಕ 28.02.2023 ರಂದು ಸದರಿ ರಾಸಾಯನಿಕ ಪರೀಕ್ಷೆಯ ವರದಿಯನ್ನು ಪಡೆದುಕೊಂಡು ಹರಿಹರದ ಅಬಕಾರಿ ಕಛೇರಿ ತಂದು ನೀಡಿರುತ್ತೇನೆ. ನಂತರ ದಿನಾಂಕ 02.03.2023 ರಂದು ಸದರಿ ವಿಷಯದ ಬಗ್ಗೆ ಚಾಸಾ 6 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಮದ್ಯದ 30 ಟೆಟ್ರಾ ಪ್ಯಾಕ್‌ಗಳನ್ನು ನೋಡಿ ಗುರುತಿಸುತ್ತಾರೆ. ಅದನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಜಪ್ತುಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಲು ನನ್ನ ಮೇಲಾಧಿಕಾರಿಗಳು ಲಿಖಿತ ಆದೇಶವನ್ನು ನೀಡಿರುತ್ತಾರೆ. ಸದರಿ ಲಿಖಿತ ಆದೇಶವನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ. ನಾನು ರಾಸಾಯನಿಕ ಪರೀಕ್ಷೆಗಾಗಿ ಮದ್ಯವನ್ನು ತೆಗೆದುಕೊಂಡು ಚಿತ್ರದುರ್ಗಕ್ಕೆ ಹೋದ ಬಗ್ಗೆ ಸಾರಿಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಯಾವುದೇ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮದ್ಯವನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಯಾವುದೇ ವರದಿಯನ್ನು ಪಡೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಿ ಪಂಚರ ಸಹಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.

ತೆಗೆದು, ಅವುಗಳನ್ನು ಸೀಲ್ ಮಾಡಿ, ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿ ಪಂಚನಾಮೆ ಜರುಗಿಸಿ ಮಾಲು ಪಟ್ಟಿ ತಯಾರಿಸಿ ವಾಹನ ಮತ್ತು ಮದ್ಯವನ್ನು ಜಪ್ತುಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 02.30 ರಿಂದ 3.00 ಗಂಟೆವರೆಗೆ ಜರುಗಿಸಲಾಯಿತು. ಸದರಿ ವಾಹನನ್ನು ಪರಿಶೀಲಿಸಲಾಗಿ ವಾಹನ ಕಪ್ಪು ನೀಲಿ ಬಣ್ಣದ ಬಜಾಜ್ ಡಿಸ್ಕವರಿ ಬೈಕ್ ಸಂಖ್ಯೆ ಕೆ ಎ 17 ಇ ಆರ್ 8769 ಆಗಿರುತ್ತದೆ. ನಂತರ ಆರೋಪಿಗೆ ಕಲಂ 41(ಎ) ಸಿ ಆರ್ ಪಿ ಸಿ ರೀತ್ಯ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಆರೋಪಿ, ಜಪ್ತುಪಡಿಸಿಕೊಂಡ ಮಾಲು ಹಾಗೂ ವಾಹನ, ಪಂಚನಾಮೆ ಜೊತೆ ಠಾಣೆಗೆ ಹಾಜರಾಗಿ ಸ್ವಪಿರ್ಯಾದಿಯನ್ನು ದಾಖಲಿಸಿ, ಠಾಣಾ ಗುನ್ನೆ ನಂ.49/2022-23 ರಂತೆ ಪ್ರವವ ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸದರಿ ಶೋಧನಾ ಸಮುಚಿತ ಆಧಾರದ ದಾಖಲೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿನ್ನು ನಿಪಿ 2(ಎ) ಎಂದು, ಮಾಲು ಪಟ್ಟಿಸಂಖ್ಯೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು, ಮಾದರಿ ಸೀಲ್ ನಮೂನೆಯನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸದರಿ ಪಿರ್ಯಾದಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು, ಪ್ರವವ ವರದಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ಮತ್ತು ಹಾಜರುಪಡಿಸಿದ ಮದ್ಯದ 30 ಟೆಟ್ರಾ ಪ್ಯಾಕ್‌ಗಳನ್ನು ಮತ್ತು ಒಂದು ಬಾಕ್ಸ ನೋಡಿ ಗುರುತಿಸುತ್ತಾರೆ. ಅದನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ 6 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ನಾನು ಗಸ್ತು ಕರ್ತವ್ಯದಲ್ಲಿದ್ದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಇದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. ಗಸ್ತು ಕರ್ತವ್ಯವನ್ನು ಬೆಳಿಗ್ಗೆ 11.30 ರಿಂದ ಇದ್ದೆ. ಗಸ್ತು ಕರ್ತವ್ಯದ ಸಮಯನ್ನು ನಿಪಿ 5 ದೂರಿನಲ್ಲಿ ನಮೂದಿಲ್ಲ ಎಂದರೆ ಸರಿ. ನಿಪಿ 1 ಶೋಧನಾ ಸಮುಚಿತ ಆಧಾರವನ್ನು ತಯಾರಿಸಿದ ಸಮಯವನ್ನು ನಿಪಿ 5 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಸರಿ. ನಿಪಿ 2 ಪಂಚನಾಮೆ ಕಾಲಕ್ಕೆ ಯಾವುದೇ ಛಾಯಾಚಿತ್ರವನ್ನು ಮತ್ತು ವಿಡಿಯೋವನ್ನು ತೆಗೆದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ನಿಪಿ 2 ರಂತೆ ನಾನು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಮದ್ಯವನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮು.ಮಾ 1 ಮತ್ತು 2 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪಿರ್ಯಾದನ್ನು ದಾಖಲಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಮೊದಲನೇ ಬಾರಿ ಈ ದಿನ

## ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ. 969/2023

| | | |
|---|---|---|
| ಹೆಸರು | ಎಂ ಮಂಜಪ್ಪ | PW –1 |
| ಗಂಡನ ಹೆಸರು | ಮೂಗಪ್ಪ ಎ | CW –1 |
| ವಯಸ್ಸು | 59 ವರ್ಷ | |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು, ದಾವಣಗೆರೆ ಉಪ ವಿಭಾಗ | ದಿನಾಂಕಃ 19.12.2024 |
| ವಾಸ | ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ದಿನಾಂಕ 28.01.2022 ರಿಂದ ಇಲ್ಲಿಯವರೆಗೆ ನಾನು ದಾವಣಗೆರೆಯ ಅಬಕಾರಿ ಉಪ ಆಯುಕ್ತರ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 07.02.2023 ರಂದು ಹರಿಹರ ತಾಲ್ಲೂಕು ಮಲೆಬೆನ್ನೂರು ಪಟ್ಟಣದಲ್ಲಿ ಗಸ್ತು ಕತರ್ವ್ಯದಲ್ಲಿದ್ದಾಗಿ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದ ಮೇರೆಗೆ, ನಮ್ಮ ಸಿಬ್ಬಂದಿಗಳಾದ ಚಾಸಾ 2 ರವರಿಗೆ ವಿಷಯ ತಿಳಿಸಿ, ಅವರ ಜೊತೆ ಇಲಾಖಾ ವಾಹನದಲ್ಲಿ ನಾನು ಮತ್ತು ನನ್ನ ಸಿಬ್ಬಂದಿಗಳನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿದ್ದು, ಒಬ್ಬ ವ್ಯಕ್ತಿ ತನ್ನ ದ್ವಿಚಕ್ರ ವಾಹನದ ಮುಂಭಾಗದಲ್ಲಿ ಒಂದು ರಟ್ಟಿನ ಬಾಕ್ಸನ್ನು ಇಟ್ಟುಕೊಂಡು ಬರುತ್ತಿದ್ದನ್ನು ಕಂಡು, ಆತನಿಗೆ ವಾಹನವನ್ನು ನಿಲ್ಲಿಸುವಂತೆ ಸನ್ನೆ ಮಾಡಿದಾಗ ಆತನು ವಾಹನವನ್ನು ನಿಲ್ಲಿಸಿದನು. ನಂತರ ಆತನಿಗೆ ಸದರಿ ಬಾಕ್ಸ ನಲ್ಲಿ ಏನು ಇದೆ ಎಂದು ಕೇಳಲಾಗಿ, ಆತನು ಗಾಬರಿಗೊಂಡು ಯಾವುದೇ ಉತ್ತರವನ್ನು ನೀಡಲಿಲ್ಲ. ಅನುಮಾನದಿಂದ ಸದರಿ ವಾಹನ ಮತ್ತು ಬಾಕ್ಸನ್ನು ಪರಿಶೀಲನೆ ಮಾಡಲು ಸ್ಥಳದಲ್ಲಿಯೇ ಶೋಧನೆ ಮಾಡಲು ನ್ಯಾಯಾಲಯದ ಅನುಮತಿ ಪಡೆಯಲು ಸಮಯಾವಕಾಶ ಇಲ್ಲದೇ ಇದ್ದುದ್ದರಿಂದ, ಅಲ್ಲಿಯೇ ಕಲಂ 54 ರ ಕ.ಅ.ಅ. ಪ್ರಕಾರ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿರುತ್ತೇನೆ.

ನಂತರ ನಾನು ಮತ್ತು ಸಿಬ್ಬಂದಿ ಅಂಗ ಶೋದನೆ ಮಾಡಿಕೊಂಡು ವ್ಯಕ್ತಿಯನ್ನು ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಆತನು ಹೆಸರು ತಿಪ್ಪೇಶಪ್ಪ ತಂದೆ ಕರಿಯಪ್ಪ, ಹಾಲಿವಾಣ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಸದರಿ ಬಾಕ್ಸ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ 96 ಹೈವರ್ಡ್ಸ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಇಷ್ಟು ಪ್ರಮಾಣದ ಮದ್ಯವನ್ನು ಸಾಗಾಣಿಕೆ ಮಾಡಲು ಯಾವುದಾದರೂ ದಾಖಲೆ ಇದೆಯೇ ಎಂದು ವಿಚಾರಿಸಲಾಗಿ ಆತನ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಮದ್ಯವನ್ನು ಸಾಗಾಟ ಮಾಡುವುದು ಅಪರಾಧ ಎಂದು ವ್ಯಕ್ತಿಗೆ ತಿಳಿಸಿರುತ್ತೇವೆ. ಆ ಕಾಲಕ್ಕೆ ಸದರಿ ಮದ್ಯದಿಂದ 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ